

ಅಂದ ಹಾಗೆ, ನರ್ಗಿಸ್ ನಾಯಕಿಯಾಗಿರುವ 'ಮದ್ರಾಸ್ ಕೆಫೆ' ಈ ವಾರ ತೆರೆ ಕಾಣುತ್ತಿದೆ. ಜಾನ್ ಅಬ್ರಹಾಂ ಮತ್ತು ಆಯುಶ್ಮಾನ್ ಖುರಾನಾ ನಾಯಕರಾಗಿರುವ ಈ ಚಿತ್ರದಲ್ಲಿ ನರ್ಗಿಸ್‌ಗೆ ಯುರೋಪಿಯನ್ ಪತ್ರಕರ್ತೆಯ ಪಾತ್ರವಿದೆ.

## ಸಿಂಗರ್ ಕಂಗನಾ



ನಟನೆ ಮೂಲಕ ಹೆಚ್ಚು ಸಾಧನೆ ಆಗದಿದ್ದರೂ, ನಟಿ ಕಂಗನಾ ರನೌತ್ ಗ್ಲಾಮರ್‌ನಿಂದ ಹೆಚ್ಚು ಸದ್ದು ಮಾಡಿದವರು. ಪ್ರಯೋಗಾತ್ಮಕ ಪಾತ್ರಗಳಿಗೆ ಒಡ್ಡಿಕೊಂಡರೂ ಮೆಚ್ಚುಗೆ ಪಡೆಯುವ ಅಭಿನಯ ನೀಡುವಲ್ಲಿ ಕಂಗನಾ ಸಫಲರಾಗಲಿಲ್ಲ. ಈಗ ಮತ್ತೊಂದು ಹೊಸ ಪಾತ್ರವನ್ನು ಕಂಗನಾ ಅಲಂಕರಿಸಿದ್ದಾರೆ. ನಟಿಯ ಜೊತೆಗೆ ಗಾಯಕಿ ಎಂಬ ವಿಶೇಷಣವೂ ಆಕೆ ಹೆಸರಿನೊಟ್ಟಿಗೆ ಸೇರಿಕೊಂಡಿದೆ. ಹೃತಿಕ್ ರೋಷನ್ ಅಭಿನಯದ 'ಕ್ರಿಶ್ 3' ಚಿತ್ರದ ರೊಮ್ಯಾಂಟಿಕ್ ಹಾಡೊಂದಕ್ಕೆ ಕಂಗನಾ ರನೌತ್ ದನಿ ನೀಡಿದ್ದಾರೆ. ಈ ಹಾಡಿನ ಕಂಪೋಸಿಂಗ್ ಕ್ಲಿಷ್ಟಕರವಾಗಿದ್ದರೂ, ಕಂಗನಾ ನುರಿತ ಗಾಯಕಿಯಂತೆ ಸಲೀಸಾಗಿ ಹಾಡಿದ್ದಾರಂತೆ. 'ಕ್ರಿಶ್ 3'ಯಲ್ಲಿ ಹಾಡಿದ್ದು ಮಾತ್ರವಲ್ಲ, ನೆಗೆಟಿವ್ ಛಾಯೆಯುಳ್ಳ ಪಾತ್ರದಲ್ಲಿಯೂ ಕಂಗನಾ ನಟಿಸಿದ್ದಾರೆ. ರಾಜೇಶ್ ರೋಷನ್ ನಿರ್ದೇಶಿಸುತ್ತಿರುವ ಈ ಚಿತ್ರ ನವೆಂಬರ್‌ನಲ್ಲಿ ತೆರೆ ಕಾಣುವ ಸಾಧ್ಯತೆಯಿದೆ. ಹೃತಿಕ್ ರೋಷನ್, ಪ್ರಿಯಾಂಕಾ ಚೋಪ್ರಾ ಮತ್ತು ವಿವೇಕ್ ಒಬೆರಾಯ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

## ರಣಬೀರ್‌ಗೆ 15 ಕೋಟಿ!



ಬಾಲಿವುಡ್‌ನ 'ಬರ್ಫಿ' ರಣಬೀರ್ ಕಪೂರ್ ಮಾರುಕಟ್ಟೆ ಮೌಲ್ಯ ಗಗನಕ್ಕೇರಿದೆ. 'ರಾಯ್' ಎಂಬ ಚಿತ್ರದಲ್ಲಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳಲು ರಣಬೀರ್ ಬರೋಬ್ಬರಿ 15 ಕೋಟಿ ರೂಪಾಯಿ ಬೇಡಿಕೆ ಇಟ್ಟಿದ್ದಾರೆ ಎಂಬ ಸುದ್ದಿ ಬಿ–ಟೌನ್‌ನಿಂದ ಹೊರಬಿದ್ದಿದೆ. ಅರ್ಜುನ್ ರಾಮ್‌ಪಾಲ್ ನಾಯಕರಾಗಿರುವ ಈ ಚಿತ್ರದಲ್ಲಿ ರಣಬೀರ್ ಹೆಸರನ್ನು ಪ್ರಚಾರಕ್ಕೆ ಬಳಸಿಕೊಳ್ಳುವ ಯೋಜನೆ ಚಿತ್ರತಂಡದ್ದು. 'ರಣಬೀರ್ ಅಷ್ಟು ಸಂಭಾವನೆ ಕೇಳಿಲ್ಲ, ಅದು ಗಾಳಿಸುದ್ದಿ' ಎಂದಿದ್ದಾರೆ ನಿರ್ದೇಶಕ ವಿಕ್ಕಿ ಸಿಂಗ್. ಗೆಲ್ಲುವ ಹೊಸ ಕುದುರೆ ರಣಬೀರ್‌ಗೆ ಭಾರೀ ಡಿಮ್ಯಾಂಡ್ ಇರುವಾಗ ಡಿಮ್ಯಾಂಡ್ ಏರುತ್ತಿರುವುದರಲ್ಲಿ ಅಚ್ಚರಿಯಿಲ್ಲ. ಆದರೆ ವಿಶೇಷ ಪಾತ್ರಕ್ಕೂ ಈ ಪಾಟಿ ಸಂಭಾವನೆ ಕೇಳುವುದೆ.. ಎಂದು ಬಾಲಿವುಡ್ ದಿಗ್ಗಜರು ದಿಗ್ಮೂಢರಾಗಿದ್ದಾರಂತೆ.

■ ಅಮಿ

## 'ಐಟಂ' ಫಖ್ರಿ

ಕತ್ರೀನಾ ಕೈಫ್, ಕರೀನಾ ಕಪೂರ್, ಚಿತ್ರಾಂಗದಾ ಸೇನ್– ಹೀಗೆ ಬಾಲಿವುಡ್ ತಾರೆಯರೆಲ್ಲಾ ಅಭಿನಯಕ್ಕಿಂತಲೂ ಐಟಂ ಸಾಂಗ್‌ಗೆ ಹೆಜ್ಜೆ ಹಾಕಲು ಪೈಪೋಟಿ ನಡೆಸುತ್ತಿದ್ದಾರೆ. ಈ ಐಟಂ ನಾಯಕಿಯರ ಸಾಲಿಗೆ ಹೊಸ ಸೇರ್ಪಡೆ ನರ್ಗಿಸ್ ಫಖ್ರಿ. 'ರಾಕ್‌ಸ್ಟಾರ್' ಚಿತ್ರದ ಮೂಲಕ ಹೆಸರು ಮಾಡಿದ ನರ್ಗಿಸ್, ಶಾಹಿದ್ ಕಪೂರ್ ನಿರ್ದೇಶನದ 'ಫಟಾ ಪೋಸ್ಟರ್ ನಿಕ್ಲಾ ಹೀರೊ' ಚಿತ್ರದಲ್ಲಿ 'ಐಟಂ ಹುಡುಗಿ'ಯಾಗಿದ್ದಾಳೆ. ಈ ಮೊದಲ ಅನುಭವ ನರ್ಗಿಸ್‌ಗೆ ಸಲೀಸು ಎನಿಸಿಲ್ಲ. 'ಐಟಂ ಗೀತೆಗೆ ಹೆಜ್ಜೆ ಹಾಕುವುದು ಅದು ತೆರೆಯ ಮೇಲೆ ಕಾಣಿಸುವಷ್ಟು ಸುಲಭವಲ್ಲ' ಎನ್ನುತ್ತಾಳೆ. ಆದರೆ ಕುಣಿತವನ್ನು ಎಂಜಾಯ್ ಮಾಡಿದ್ದು ನಿಜವಂತೆ.

ಪಾಕಿಸ್ತಾನಿ ತಂದೆ, ಜೆಕ್ ಗಣರಾಜ್ಯದ ತಾಯಿಗೆ ಜನಿಸಿ, ನ್ಯೂಯಾರ್ಕ್‌ನಲ್ಲಿ ಬೆಳೆದ ಈ ಸುಂದರಿ ಹಿಂದಿ ಕಲಿಯಲು ಪಡುತ್ತಿರುವ ಪಾಡು ಅಷ್ಟಿಷ್ಟಲ್ಲ. ಹಿಂದಿ ತರಗತಿಗೆ ಹೋಗುತ್ತಿದ್ದರೂ ಆಕೆಯ ಪಾಲಿಗೆ ಹಿಂದಿ ಕಬ್ಬಿಣದ ಕಡಲೆಯಂತೆ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65